


ನಾನೇಕೆ
ಮಣ್ಣಿನ ಕಣ ಕಣವ ಕುರಿತು
ಬರೆಯುತ್ತೇನೆಂದರೆ
ಜಗದ ಜೀವಿಗಳಿಗೆಲ್ಲ
ಹಸಿವು ಹಿಂಗಿಸುವ
ಈ ಮಣ್ಣಿನಲ್ಲಿಯೇ – ಗುಬ್ಬಿ ಗೂಡು ಕಟ್ಟಿ
ಇದು ನನ್ನ ಮನೆ – ಎಂದು ಎದೆಯುಬ್ಬಿಸಿದವ ನಾನು

ನಾನೇಕೆ
ಕುರಿ, ಕೋಳಿ, ಕಾಗೆ, ಗುಬ್ಬಿ, ನಾಯಿಗಳ ಕುರಿತು
ಬರೆಯುತ್ತೇನೆಂದರೆ
ಇವುಗಳ ಒಡನಾಟ, ಗುಣ ಸ್ವಭಾವ
ನನಗೆ ಪ್ರಾಣದಲಿ ಪ್ರಾಣ
ಮನುಷ್ಯನಿಗಿಂತಲೂ ಮಿಗಿಲು

ನಿಮ್ಮದೊಂದು ಲೋಕ
ನನ್ನದು ಈ ಲೋಕ

ಎಲ್ಲ ಬೇರಿಗೂ ಉಂಟು
ಬೆವರಿನ ನಂಟು
ನೆಲ ಮುಟ್ಟುವ ಪ್ರೀತಿಯ ಗಂಟು
ಇದು ನನ್ನ ಇಡಿಗಂಟು
ಅಲ್ಲ ಕಳ್ಳಿ ಹಾಲಿನ ನಂಟು

● **ಸತ್ಯಾನಂದ ಪಾತ್ರೋಟ**